

**ಪರಿಣಾಮ**

ಅಪ್ಪ: ನಿನ್ನಮ್ಮನೇಕೆ ಇಂದು ಸುಮ್ಮನೆ ಕೂತಿದ್ದಾಳೆ ಪಾಪು?'

ಪಾಪು: ಅಮ್ಮ ಲಿಪ್ ಸ್ಟಿಕ್ ಕೇಳಿದಳು, ನಂಗೆ ಫೆವಿ ಸ್ಟಿಕ್ ಎಂದು ಕೇಳಿಸಿತು..!

★★★

**ಗುಪ್ತ ಕಾರ್ಯಾಚರಣೆ**

ಗೋಪಿ: ತುಂಬಾ ಯೋಚನೆಯಲ್ಲಿರುವಂತಿದೆ..?

ಗುಂಡ: ಹೌದು, ನಾನು ಅಪ್ಪನಾಗುತ್ತಿದ್ದೇನೆ.

ಗೋಪಿ: ಅದಕ್ಕೆ ಖುಷಿ ಪಡುವುದನ್ನು ಬಿಟ್ಟು ನೀನೇಕೆ ಈ ಪರಿ ಚಿಂತಿಸುತ್ತಿರುವೆ?

ಗುಂಡ: ಏಕೆಂದರೆ, ವಿಷಯ ನನ್ನ ಹೆಂಡ್ತಿಗೆ ಗೊತ್ತಿಲ್ಲ; ಒಂದು ವೇಳೆ ಗೊತ್ತಾದರೆ...?

★★★

**ಋಣಾತ್ಮಕ ಅನುಭವ!**

ಸಂದರ್ಶಕರು: ಈ ಹುದ್ದೆಗಾಗಿ ನಮಗೆ ಓರ್ವ ಜವಾಬ್ದಾರಿಯುತ ಅಭ್ಯರ್ಥಿಯ ಅವಶ್ಯಕತೆಯಿದೆ.

ಅಭ್ಯರ್ಥಿ: ಹಾಗಾದರೆ ನಾನು ಈ ಹುದ್ದೆಗೆ ಸೂಕ್ತನಾಗಿದ್ದೇನೆ. ಏಕೆಂದರೆ ನನ್ನ ಕಳೆದ ಉದ್ಯೋಗದಲ್ಲಿ ಪ್ರತೀ ಬಾರಿ ಸಂಭವಿಸಿದ ತಪ್ಪುಗಳಿಗೆ ನನ್ನನ್ನೇ ಜವಾಬ್ದಾರನನ್ನಾಗಿ ಮಾಡಿದ್ದರು...

★★★

**ಲೆಕ್ಕ ಪ್ರಕಾರ...**

ಪತ್ನಿ: ಎಲ್ಲಾ ರೀತಿಯ ವಿವಾಹ ವಿಧಿ ವಿಧಾನಗಳಲ್ಲಿ, ವಧು ಎಡ ಭಾಗದಲ್ಲಿ ಮತ್ತು ವರ ಬಲಭಾಗದಲ್ಲಿ ಕುಳಿತಿರುತ್ತಾರೆ, ಹಾಗೇಕೆ?

ಪತಿ: ಏಕೆಂದರೆ ಲಾಭ– ನಷ್ಟಗಳ ಲೆಕ್ಕ ಪತ್ರ ಖಾತೆಗಳಲ್ಲಿ ಆದಾಯವನ್ನೆಲ್ಲಾ ಬಲಭಾಗದಲ್ಲೂ ಖರ್ಚುಗಳನ್ನು ಎಡಭಾಗದಲ್ಲೂ ಬರೆಯಲಾಗುತ್ತದೆ!

★★★

**ಸಹಾಯವಾಣಿ**

'ನೀವು ಕುಡಿತಕ್ಕೆ ದಾಸರಾಗಿದ್ದರೆ ಈ ಕೆಳಗಿನ ಸಹಾಯವಾಣಿಗೆ ಕರೆ ಮಾಡಿ' ಹೀಗೊಂದು ಜಾಹೀರಾತು ಗಮನಿಸಿ, ಸಹಾಯವಾಣಿಗೆ ಕರೆ ಮಾಡಿದ ಗುಂಡನಿಗೆ ಅತ್ತಲಿಂದ; 'ಮೂರು ಖರೀದಿಸಿದರೆ ಒಂದು ಬಾಟಲ್ ಫ್ರೀ' ಎಂಬ ಉತ್ತರ ಬಂತು.

ಗುಂಡ: ನಿಮ್ಮ ವಿಳಾಸ?

ಸಹಾಯವಾಣಿ: ನಿಮ್ಮ ಸನಿಹದ ಯಾವುದೇ ಗುಡ್ ಲಕ್ ವೈನ್ ಶಾಪ್ ಔಟ್ ಲೆಟ್‌ಗೆ ಭೇಟಿ ನೀಡಿ!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ಗುಂಡ: ಇದೇ ಮೊದಲ ಸಲ ವಿಮಾನದಲ್ಲಿ ಪಯಣಿಸುತ್ತಿದ್ದೇನೆ. ಯಾಕೋ ಹೆದರಿಕೆ ಆಗುತ್ತಿದೆ.

ಗೆಳೆಯ: ಹೆದರಿಕೆ ಯಾಕೆ? ಅಂತಹ ಸಂದರ್ಭ ಬಂದರೆ ಪ್ಯಾರಾಚೂಟ್ ಕೊಡುತ್ತಾರೆ. ಸುಮ್ಮನಿರು.

ಗುಂಡ: ಸಾಯುವ ಸಮಯ ಬಂದರೆ ಕೊಬ್ಬರಿ ಎಣ್ಣೆಯನ್ನಿಟ್ಟುಕೊಂಡು ಏನು ಮಾಡುವುದು?

★★★

ಅಧಿಕಾರಿ: ಏನ್ರೀ ಇಷ್ಟೊಂದು ರಜ ತಗೋತಾ ಇದೀರಾ? ಕಳೆದವಾರ ಮಗನ ಹುಟ್ಟುಹಬ್ಬಕ್ಕೇಂತ ರಜ ತಗೊಂಡಿದ್ರಿ.

ಗುಂಡ: ನೀವು ಹೇಳೋದು ನಿಜ ಸಾರ್! ಆದರೆ ಈಗ ನನ್ನ ಮದುವೆಗೆ ರಜ ಬೇಕಾಗಿದೆ.

★★★

ಕಳ್ಳ (ಕೋರ್ಟಿನಲ್ಲಿ): ಏನು ಮಹಾಸ್ವಾಮಿ! ಕೇವಲ ಒಂದು ಹಗ್ಗ ಕದ್ದಿದ್ದಕ್ಕೆ ಒಂದು ತಿಂಗಳು ಸೆರೆಮನೆ ವಾಸದ ಶಿಕ್ಷೆಯೇ?

ನ್ಯಾಯಾಧೀಶ: ಹಗ್ಗಕ್ಕೆ ಹಸು ಕಟ್ಟಿದ್ದನ್ನು ಮರೆತುಬಿಟ್ಟೆಯಾ?

★★★



ರಾಯರು: ಏನಯ್ಯಾ ದೀಪಾವಳಿ ಜೋರಾ? ಎಲ್ಲಿ ನಿನ್ನ ಮಾವ?

ಗುಂಡ: ಅವರು ಮನೇಲಿ ಇಲ್ಲ ಸಾರ್.

ರಾಯರು: ಎಲ್ಲಿಗೆ ಹೋಗಿದ್ದಾರೆ?

ಗುಂಡ: ಹಬ್ಬಕ್ಕೆ ಅವರ ಮಾವನ ಮನೆಗೆ.

★★★

ಅಡುಗೆ ಭಟ್ಟ: ಸಾರ್ ಬಾಳೆ ಎಲೆ ಜೋಪಾನ.

ಗುಂಡ: ಯಾಕೆ ಹಾಗೆ ಹೇಳುತ್ತೀರಿ ಭಟ್ಟರೇ?

ಅಡುಗೆ ಭಟ್ಟ: ಮತ್ತಿನ್ನೇನು? ನೀವೊಬ್ಬರೇ ಊಟ ಮಾಡಿದರಾಯ್ತೆ? ಬೇರೆಯವರು ಊಟ ಮಾಡಬಾರದೇ? ನಿಮಗಿಂತ ಮುಂಚೆ ಊಟ ಮಾಡಿದವರು ಎಷ್ಟು ಕ್ಲೀನಾಗಿ ಎಲೇನ ಒರೆಸಿಟ್ಟಿದ್ದಾರೆ ನೀವೇ ನೋಡಿ.

★★★

ಗಿರಾಕಿ: ಏನಯ್ಯಾ ಟೀ ಇಷ್ಟೊಂದು ತಣ್ಣಗಿದೆ?

ಮಾಣಿ: ಇದು ಡಾರ್ಜಿಲಿಂಗ್ ಟೀ ಸಾರ್ ಅದಕ್ಕೆ.

(ಸಂಗ್ರಹ) **ಎಂ.ಕೆ. ಮಂಜುನಾಥ್, ಬೆಂಗಳೂರು**